# 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| | |
|---|---|
| ಎಸ್ ಸಿ : | 231/2022 |

| | | |
|---|---|---|
| ಸಾಕ್ಷಿದಾರರ ಹೆಸರು | ಶ್ರೀ ಪ್ರದೀಪ್ ಎಮ್ | |
| ತಂದೆಯ ಹೆಸರು | ಶ್ರೀ ನಿಂಗಾಚಾರಿ | ಸಾಕ್ಷಿಗೆ **ದಿಃ 02.02.2024** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | 27 ವರ್ಷ | |
| ಉದ್ಯೋಗ | ಮರದ ಕೆಲಸ | ಪಿ.ಡಬ್ಲ್ಯೂ–12 |
| ವಾಸ ಸ್ಥಳ | ಬ್ರಹ್ಮಾಪುರ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು. | ಸಿ.ಡಬ್ಲ್ಯೂ–08 |

## ಮುಖ್ಯ ವಿಚಾರಣೆ:– ಮಾನ್ಯ ಸರ್ಕಾರಿ ಅಭಿಯೋಜಕರಿಂದಃ–

1. ಮೃತ ನಂಜಮ್ಮ ನನ್ನ ತಾಯಿಯ ತಾಯಿ ಮತ್ತು ನನಗೆ ಅಜ್ಜಿ ಆಗಬೇಕು. ಶ್ರೀಮತಿ ನಂಜಮ್ಮ ಅವರಿಗೆ 5 ಜನ ಮಕ್ಕಳು ಮತ್ತು ಅವರ ಹೆಸರುಗಳು ಕ್ರಮವಾಗಿ ಗೌರಮ್ಮ, ಸಿದ್ದಪ್ಪಾಜಿ, ನಾಗಮ್ಮ, ಪದ್ಮ ಮತ್ತು ಕಲ್ಪನ. ಸಿದ್ದಪ್ಪಾಜಿ ಅವರು ಮೃತಪಟ್ಟಿದ್ದಾರೆ. ಸಿದ್ದಪ್ಪಾಜಿ ಅವರ ಪತ್ನಿಯ ಹೆಸರು ನಾಗಮ್ಮ. ಸಿದ್ದಪ್ಪಾಜಿ ಅವರಿಗೆ ಸಿದ್ದರಾಜು, ಲಾವಣ್ಯ ಮತ್ತು ಸೀತಾರಾ ಮಕ್ಕಳು. ನನ್ನ ತಾಯಿಯ ಹೆಸರು ಪದ್ಮ–ಚಾಸಾ–1. ಚಾಸಾ–6– ಸೋಮಾಚಾರಿ ನನ್ನ ದೊಡ್ಡಪ್ಪ. ಚಾಸಾ–10 ನನ್ನ ತಂದೆ. ಚಾಸಾ–11 ನನ್ನ ದೊಡ್ಡಮ್ಮ.

2. ಶ್ರೀಮತಿ ನಂಜಮ್ಮ ಮೃತಪಟ್ಟು ಮೂರು ವರ್ಷಗಳು ಆಗಿದೆ. ಶ್ರೀಮತಿ ನಂಜಮ್ಮ ಅವರು ಸಿದ್ದಪ್ಪಾಜಿ ಅವರಿಗೆ ಸೇರಿದ ಕಟ್ಟಡದ 2 ನೇ ಮಹಡಿಯ ಒಂದು ರೂಮಿನಲ್ಲಿ ವಾಸ ಇದ್ದರು. ಶ್ರೀಮತಿ ನಂಜಮ್ಮ ಅವರ ಸೊಸೆ ಮತ್ತು ಮಕ್ಕಳು 1 ನೇ ಮಹಡಿಯಲ್ಲಿ ವಾಸ ಇದ್ದರು. ನೆಲ ಅಂತಸ್ತನ್ನು ಬಾಡಿಗೆಗೆ ಕೊಟ್ಟಿದ್ದರು. ಸಿದ್ದಪ್ಪಾಜಿ ಮೃತಪಟ್ಟ ಅಂದಾಜು 10 ವರ್ಷ ಮೀರಿದೆ. ಶ್ರೀಮತಿ ನಂಜಮ್ಮ ಮತ್ತು ಅವರ ಸೊಸೆ ಮತ್ತು ಮಕ್ಕಳ ನಡುವೆ ವಿಶ್ವಾಸ

ಚೆನ್ನಾಗಿ ಇರಲಿಲ್ಲ. ಶ್ರೀಮತಿ ನಂಜಮ್ಮ ಅವರಿಗೆ ಊಟ ಮತ್ತು ಉಪಚಾರ ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ. ಶ್ರೀಮತಿ ನಂಜಮ್ಮ ಅವರು ಸ್ವತಃ ಅಡುಗೆ ಮಾಡಿಕೊಂಡು ಇದ್ದರು. ಶ್ರೀಮತಿ ನಂಜಮ್ಮ ಅವರಿಗೆ ಸೇರಿದ ಆಸ್ತಿಯನ್ನು ಮಾರಾಟ ಮಾಡಿ ಸಿದ್ದಪ್ಪಾಜಿ ಅವರು ಮೈಸೂರು ಹೆಬ್ಬಾಳದಲ್ಲಿ ಮನೆಯನ್ನು ಕಟ್ಟಿದ್ದರು. ಶ್ರೀಮತಿ ನಂಜಮ್ಮ ಅವರು ತನ್ನ ಹೆಣ್ಣು ಮಕ್ಕಳಿಗೆ ಆಸ್ತಿ ಕೊಡುವ ಬಗ್ಗೆ ಆಸೆಪಟ್ಟಿದ್ದರು. ಅದೇ ಕಾರಣವಾಗಿ ಸಿದ್ದಪ್ಪಾಜಿ ಅವರ ಪತ್ನಿ ಮತ್ತು ಮಕ್ಕಳು ಹಾಗೂ ಶ್ರೀಮತಿ ನಂಜಮ್ಮ ಅವರ ನಡುವೆ ವಿಶ್ವಾಸ ಇರಲಿಲ್ಲ ಮತ್ತು ಅದೇ ಕಾರಣ ಶ್ರೀಮತಿ ನಂಜಮ್ಮ ಅವರ ಮೇಲೆ ಹಲ್ಲೆ ಮಾಡುತ್ತಿದ್ದ ಮೇಲೆ ಹೇಳುತ್ತಿದ್ದರು. ಆಗಾಗ ನಾನು ಶ್ರೀಮತಿ ನಂಜಮ್ಮ ಅವರ ಮನೆಗೆ ಹೋದಾಗ ಮತ್ತು ಶ್ರೀಮತಿ ನಂಜಮ್ಮ ಅವರು ನಮ್ಮ ಮನೆಯ ಕಡೆಗೆ ಬಂದಾಗ ಸದರಿ ವಿಷಯವನ್ನು ತಿಳಿಸಿದ್ದರು. ಸಿದ್ದಪ್ಪಾಜಿ ಮರಣದ ನಂತರ ಅವರ ಪತ್ನಿ ಮತ್ತು ಮಕ್ಕಳು ಚಾಸಾ–1, ಚಾಸಾ–11 ರಿಂದ ಚಾಸಾ–14 ಅವರ ಹತ್ತಿರ ಮಾತನಾಡುತ್ತಿರಲಿಲ್ಲ.

3. ದಿಃ 03.10.2021 ರಂದು ನ್ಯಾಯಾಲಯದಲ್ಲಿ ಹಾಜರು ಇರುವ 3 ನೇ ಆರೋಪಿ ಚಾಸಾ–16 ಅವರಿಗೆ ಫೋನ್ ಮೂಲಕ ಶ್ರೀಮತಿ ನಂಜಮ್ಮ ಅವರ ಮನೆಯ ಬಾಗಿಲನ್ನು ತೆಗೆಯುತ್ತಿಲ್ಲ ಎಂದು ಮಾಹಿತಿ ಕೊಟ್ಟಿದ್ದರು. ಮಧ್ಯಾಹ್ನ 3.00 ರ ವೇಳೆಗೆ ಚಾಸಾ–16 ಅವರು ನನ್ನ ತಾಯಿಗೆ ಈ ಬಗ್ಗೆ ಫೋನ್ ಮೂಲಕ ಮಾಹಿತಿ ಕೊಟ್ಟಿದ್ದರು. ಚಾಸಾ–16 ಅವರು ಚಾಸಾ–7 ಅವರಿಗೆ ಫೋನ್ ಮೂಲಕ ತಿಳಿಸಿದ್ದರು. ನಾನು ಮತ್ತು ನನ್ನ ತಾಯಿ ಶ್ರೀಮತಿ ನಂಜಮ್ಮ ಅವರ ಮನೆಯ ಬಳಿ ಹೋಗುವ ಮೊದಲು ಚಾಸಾ–7 ಅವರು ಹೋಗಿದ್ದರು. ಶ್ರೀಮತಿ ನಂಜಮ್ಮ ಅವರು ವಾಸ ಇದ್ದ ರೂಮಿನ ಬಳಿ ಹೋಗಿ ಶ್ರೀಮತಿ ನಂಜಮ್ಮ ಅವರನ್ನು ಕೂಗಲಾಗಿ ಅವರು ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ ಮತ್ತು ನಾವುಗಳು ಕಿಟಕಿಯಲ್ಲಿ ನೋಡಿದಾಗ ಶ್ರೀಮತಿ ನಂಜಮ್ಮ ಹಾಸಿಗೆ ಮೇಲೆ ಮುಖ ಮೇಲೆ ಮಾಡಿ ಮಲಗಿದ್ದ ಬಗ್ಗೆ ಕಂಡು ಬಂದಿತ್ತು. ಈ ಬಗ್ಗೆ ಮನೆಯ ಇತರೆ ಸದಸ್ಯರಿಗೆ ಮಾಹಿತಿ ಕೊಟ್ಟಿದ್ದೇವೆ.

4. ನಾನು ಮತ್ತು ಚೇತನ ಸೇರಿಕೊಂಡು ರೂಮಿನ ಬಾಗಿಲನ್ನು ಒಡೆದು ತೆಗೆದಿರುತ್ತೇವೆ. ನಾವು ಶ್ರೀಮತಿ ನಂಜಮ್ಮ ಅವರ ರೂಮಿನ ಬಳಿ ಇದ್ದಾಗ ಎಲ್ಲಾ ಆರೋಪಿಗಳು ಇದ್ದರು. ಶ್ರೀಮತಿ ನಂಜಮ್ಮ ವಾಸ ಇದ್ದ ರೂಮಿನ ಬಾಗಿಲಿಗೆ ಹೊರಗಡೆಯಿಂದ ಲಾಕ್ ಆಗಿತ್ತು. ನಾವುಗಳು ರೂಮಿನ ಒಳಗಡೆ ಹೋಗಿ ನೋಡಿದಾಗ ಶ್ರೀಮತಿ ನಂಜಮ್ಮ ಅವರು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಮತ್ತು ಮುಖ, ಹಣೆ, ಕತ್ತಿನ ಬಳಿ, ಕೈಯ ಹೆಬ್ಬೆರಳಿನ ಮೇಲೆ ತರಚಿದ ಗಾಯಗಳು ಕಂಡು ಬಂದಿತ್ತು. ಮೊಣಕಾಲಿನ ಬಳಿ ನೀಲಿ ಬಣ್ಣಗಟ್ಟಿತ್ತು. ಶ್ರೀಮತಿ ನಂಜಮ್ಮ ಅವರನ್ನು ಯಾರೋ ಕೊಲೆ ಮಾಡಿರುವುದಾಗ ಕಂಡು ಬಂದಿತ್ತು. ಶ್ರೀಮತಿ ನಂಜಮ್ಮ ಅವರನ್ನು ನೋಡಿದ ಮೇಲೆ ಚಾಸಾ–1 ನನ್ನ ತಾಯಿ ಪದ್ಮ ಪೊಲೀಸರಿಗೆ ದೂರು ಕೊಟ್ಟಿದ್ದಾರೆ. ಪೊಲೀಸರು ಸ್ಥಳಕ್ಕೆ ಬಂದು ಮಹಜರ ಕ್ರಮ ಮಾಡಿದ್ದಾರೆ. ಶ್ರೀಮತಿ ನಂಜಮ್ಮ ಅವರ ಮೃತದೇಹವನ್ನು ಕೆ.ಆರ್.ಆಸ್ಪತ್ರೆಯ ಶವಾಗಾರಕ್ಕೆ ತೆಗೆದುಕೊಂಡು ಹೋಗಿದ್ದರು. ನಾನು ಹಾಜರು ಇದ್ದೆ ಮತ್ತು ನನ್ನ ಸಮಕ್ಷಮ ಮಹಜರ ಮಾಡಿದ್ದಾರೆ. ಶ್ರೀಮತಿ ನಂಜಮ್ಮ ಅವರನ್ನು ಯಾರೋ ಕೊಲೆ ಮಾಡಿರುವುದಾಗಿ ನಾನು ಹೇಳಿಕೆ ಕೊಟ್ಟಿದ್ದೇನೆ. ದಿಃ 04.10.2021 ರಂದು ನಂಜಮ್ಮ ಅವರ ದೇಹದ ಅಂತ್ಯಕ್ರಿಯೆ ಮಾಡಲಾಯಿತು.

5. 3–4 ದಿನಗಳ ನಂತರ ನಾನು, ನನ್ನ ತಾಯಿ ಮತ್ತು ಇತರರು ಪೊಲೀಸ್ ಠಾಣೆಗೆ ಹೋಗಿ ಘಟನೆ ಬಗ್ಗೆ ವಿಚಾರಿಸಲಾಗಿ 1 ರಿಂದ 3 ನೇ ಆರೋಪಿಗಳು ಮತ್ತು ನಾಗಮ್ಮ ಠಾಣೆಯಲ್ಲಿ ಇದ್ದರು. ಎಲ್ಲಾ ಆರೋಪಿಗಳು, ಶ್ರೀಮತಿ ನಂಜಮ್ಮ ಅವರಿಗೆ ಪ್ಲಾಸ್ಟಿಕ್ ಕವರ್ ನಿಂದ ಉಸಿರುಗಟ್ಟಿಸಿ ದೊಣ್ಣೆಯಿಂದ ಹಲ್ಲೆ ಮಾಡಿ ಕೊಲೆ ಮಾಡಿ ಹಾಸಿಗೆ ಮೇಲೆ ಮಲಗಿಸಿದ ಬಗ್ಗೆ ಆರೋಪಿಗಳು ಪೊಲೀಸರ ಸಮಕ್ಷಮ ಒಪ್ಪಿಕೊಂಡ ಬಗ್ಗೆ ನಮಗೆ ತಿಳಿಸಿದ್ದರು. ಶ್ರೀಮತಿ ನಂಜಮ್ಮ ಅವರನ್ನು ಕೊಲೆ ಮಾಡಿದ ನಂತರ ಆರೋಪಿಗಳು ಮನೆಯಿಂದ ಹೊರಗಡೆ ಬಂದು ರೂಮಿನ ಬಾಗಿಲಿಗೆ ಡೂರ್ ಲಾಕ್ ಮಾಡಿ ಕಿಟಕಿಯ ಗ್ಲಾಸ್ ನ್ನು ಒಡೆದು ಕೀ ಯನ್ನು ಕಿಟಕಿಯ ಮೂಲಕ ಮನೆಯ ಒಳಗಡೆ ಹಾಕಿರುವುದಾಗಿ ಆರೋಪಿಗಳು ಪೊಲೀಸರ ಸಮಕ್ಷಮ ತಿಳಿಸಿದ್ದರು. ಶ್ರೀಮತಿ ನಂಜಮ್ಮ ಅವರ ಕೈ, ಕಾಲುಗಳನ್ನು ಹಗ್ಗ ಮತ್ತು ವೇಲ್‌ನಿಂದ ಕಟ್ಟಿದ ಬಗ್ಗೆ ತಿಳಿದು ಬಂತು. ಶ್ರೀಮತಿ ನಂಜಮ್ಮ ಅವರು ತನ್ನ ಹೆಣ್ಣು ಮಕ್ಕಳಿಗೆ ಆಸ್ತಿ ಕೊಡುವ ವಿಚಾರವಾಗಿ ಆರೋಪಿಗಳು ಕೊಲೆ

ಮಾಡಿರುವುದಾಗಿ ತಿಳಿದು ಬಂತು. ಘಟನೆ ಬಗ್ಗೆ ನನಗೆ ತಿಳಿದ ಮಾಹಿತಿಯನ್ನು ನಾನು ಪೊಲೀಸರ ಸಮಕ್ಷಮ ಹೇಳಿಕೆ ಕೊಟ್ಟಿದ್ದೇನೆ. ನ್ಯಾಯಾಲಯದಲ್ಲಿ ಹಾಜರು ಇರುವ 1 ರಿಂದ 3 ಮತ್ತು ನಾಗಮ್ಮ ಅವರನ್ನು ನೋಡಿ ಗುರುತಿಸಿರುತ್ತೇನೆ.

**ಪಾಟೀಸವಾಲು :- ಆರೋಪಿ ಪರ ಎನ್.ಎನ್.ಆರ್ ವಕೀಲರಿಂದಃ-**

6. ನಾನು 10 ನೇ ತರಗತಿ ವಿದ್ಯಾಭ್ಯಾಸ ಮಾಡಿದ್ದೇನೆ. ಚಾಸಾ-1 ನನ್ನ ತಾಯಿ ಎಂದರೆ ಸರಿ. ನಾನು ಬ್ರಹ್ಮಾಪುರ ಗ್ರಾಮದಲ್ಲಿ ಕೆಲಸ ಮಾಡಿಕೊಂಡು ವಾಸ ಇದ್ದೇನೆ ಎಂದರೆ ಸರಿ. ಶ್ರೀಮತಿ ನಂಜಮ್ಮ ರೂಮಿನಿಂದ ನನ್ನ ಮನೆಗೆ ಸುಮಾರು 11 ಕಿ.ಮೀ ದೂರ ಇದೆ. 1, 3 ಮತ್ತು 4 ನೇ ಆರೋಪಿಗಳು ನನ್ನ ಅಜ್ಜಿ ನಂಜಮ್ಮ ಅವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಂಜಮ್ಮ ಅವರಿಗೆ ಅಂದಾಜು 75-80 ವರ್ಷ ಆಗಿತ್ತು ಎಂದರೆ ಸರಿ. ಶ್ರೀಮತಿ ನಂಜಮ್ಮ ಅವರಿಗೆ ವಯಸ್ಸಿನ ಕಾರಣ ಖಾಯಿಲೆಗಳು ಇದ್ದವು ಎಂದರೆ ಸರಿಯಲ್ಲ. ಶ್ರೀಮತಿ ನಂಜಮ್ಮ ಅವರಿಗೆ ದೃಷ್ಟಿ ತೊಂದರೆ ಇತ್ತು ಎಂದರೆ ಸರಿಯಲ್ಲ. ಶ್ರೀಮತಿ ನಂಜಮ್ಮ ಅವರಿಗೆ ದೃಷ್ಟಿ ದೋಷ ಮತ್ತು ಆರೋಗ್ಯ ತೊಂದರೆಗಳು ಇದ್ದ ಕಾರಣ ಆರೋಪಿತರ ಮೇಲೆ ಅವಲಂಬಿತ ಇದ್ದರು ಎಂದರೆ ಸರಿಯಲ್ಲ. ಶ್ರೀಮತಿ ನಂಜಮ್ಮ ಅವರು ಮಾರಿದ ಆಸ್ತಿಯಿಂದ ಬಂದ ಹಣವನ್ನು ತನ್ನ ಹೆಣ್ಣು ಮಕ್ಕಳಿಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಉಳಿದ ಹಣವನ್ನು ಸಿದ್ದಪ್ಪಾಜಿ ಅವರಿಗೆ ಕೊಟ್ಟಿದ್ದು ಅವರು ಹಣವನ್ನು ಸೇರಿಸಿ ಮನೆ ಕಟ್ಟಿದ್ದರು ಎಂದರೆ ಸರಿಯಲ್ಲ. ಶ್ರೀಮತಿ ನಂಜಮ್ಮ ಅವರು ಚೆನ್ನಾಗಿ ಉಳಿಯಲು ಸಿದ್ದಪ್ಪಾಜಿ ಅವರು ಪ್ರತ್ಯೇಕವಾಗಿ ರೂಮನ್ನು ಕಟ್ಟಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ಸಿದ್ದಪ್ಪಾಜಿ ಅವರು ತಮ್ಮ ಅಕ್ಕ-ತಂಗಿಯರ ಮದುವೆ ಕಾರ್ಯಗಳನ್ನು ಹಣ ಖರ್ಚು ಮಾಡಿ ಮಾಡಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ಸಿದ್ದಪ್ಪಾಜಿ ಅವರು ಜೀವಂತ ಇದ್ದಾಗ ಎಲ್ಲಾ ಆರೋಪಿಗಳು ಸೇರಿ ಶ್ರೀಮತಿ ನಂಜಮ್ಮ ಅವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಿದ್ದಪ್ಪಾಜಿ ಜೀವಂತ ಇದ್ದಾಗ ನಾನು ಅವರ ಮನೆಗೆ ಹೋಗಿ ಬರುತ್ತಿದ್ದೆ ಎಂದರೆ ಸರಿ.

7. 4 ನೇ ಆರೋಪಿ ನಾಗಮ್ಮ, ಶ್ರೀಮತಿ ನಂಜಮ್ಮ ಅವರ ಹೆಸರಿನಲ್ಲಿ ರೂ. 49,000/- ಹಣ ಠೇವಣಿ ಇಟ್ಟಿದ್ದರು ಮತ್ತು 3 ನೇ ಆರೋಪಿಯನ್ನು ನಾಮಿನಿ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಠೇವಣಿ ಇಟ್ಟಿದ್ದ ಹಣವನ್ನು ಚಾಸಾ-1 ಮತ್ತು ಅವರ ಅಕ್ಕ-ತಂಗಿಯರು ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಿದ್ದಪ್ಪಾಜಿ ಕಟ್ಟಿದ ಮನೆಯಲ್ಲಿ ಭಾಗ ಕೊಡುವಂತೆ ಚಾಸಾ-1 ಮತ್ತು ಅವರ ಅಕ್ಕ-ತಂಗಿಯರು ಶ್ರೀಮತಿ ನಂಜಮ್ಮ ಅವರಿಗೆ ಹಿಂಸೆ ಕೊಡುತ್ತಿದ್ದರು ಎಂದರೆ ಸರಿಯಲ್ಲ. ಆಸ್ತಿ ವಿಚಾರವಾಗಿ ಆರೋಪಿಗಳು ಶ್ರೀಮತಿ ನಂಜಮ್ಮ ಅವರ ಜೊತೆ ಜಗಳ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ-1 ಮತ್ತು ಅವರ ಅಕ್ಕ-ತಂಗಿಯರ ಮಕ್ಕಳು ಆಸ್ತಿ ವಿಚಾರವಾಗಿ ಶ್ರೀಮತಿ ನಂಜಮ್ಮ ಅವರ ಜೊತೆ ಜಗಳ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಶ್ರೀಮತಿ ನಂಜಮ್ಮ ಅವರು ತಮಗೆ ತೊಂದರೆ ಕೊಡುತ್ತಿದ್ದ ಬಗ್ಗೆ ನಮಗೆ ತಿಳಿಸಿದಾಗ ನಾವು ಪೊಲೀಸರಿಗೆ ಮಾಹಿತಿ ಕೊಟ್ಟಿಲ್ಲ.

8. ದಿಃ 03.10.2021 ರಂದು ಚಾಸಾ-16 ಅವರು ಫೋನ್ ಮೂಲಕ ಚಾಸಾ-1 ಅವರಿಗೆ ಶ್ರೀಮತಿ ನಂಜಮ್ಮ ಅವರ ಬಗ್ಗೆ ಮಾಹಿತಿ ಕೊಟ್ಟಿದ್ದರು. ಚಾಸಾ-16 ಅವರ ಮೊಬೈಲ್ ಸಂಖ್ಯೆ ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ತಾಯಿ ಮಧ್ಯಾಹ್ನ 2.00 ರ ವೇಳೆಗೆ ಮನೆ ಬಿಟ್ಟು 3.00 ಗಂಟೆಗೆ ಶ್ರೀಮತಿ ನಂಜಮ್ಮ ವಾಸ ಇದ್ದ ರೂಮಿನ ಹತ್ತಿರ ಹೋಗಿದ್ದೆವು. ನಾವು ಸ್ಥಳಕ್ಕೆ ಹೋದಾಗ ಚಾಸಾ-7 ಅವರು ಸ್ಥಳದಲ್ಲಿ ಇದ್ದರು. ರೂಮಿನ ಬಾಗಿಲ ಪಕ್ಕದಲ್ಲಿ ಇದ್ದ ಕಿಟಕಿ ಇದೆ. ರೂಮಿಗೆ ಎರಡು ಕಿಟಕಿಗಳು ಮಾತ್ರ ಇವೆ. ನಾನು ಹೇಳಿದಂತೆ ಕಿಟಕಿ ಗ್ಲಾಸ್ ಒಡೆದಿರಲಿಲ್ಲ ಎಂದರೆ ಸರಿಯಲ್ಲ. ಕಿಟಕಿ ಬಾಗಿಲು ಮತ್ತು ರೂಮಿನ ಬಾಗಿಲು ಒಳಗಡೆಯಿಂದ ಹಾಕಿತ್ತು ಎಂದರೆ ಸರಿಯಲ್ಲ. ನಾವು ರೂಮಿನ ಬಾಗಿಲನ್ನು ಒಡೆದು ಒಳಗಡೆ ಹೋದ ನಂತರ ಪೊಲೀಸರು ಬಂದಿದ್ದರು ಎಂದರೆ ಸರಿ. ರೂಮಿನ ಕಿಟಕಿಯ ಬಾಗಿಲನ್ನು ನಾವು ಒಡೆದಿದ್ದೇವೆ ಎಂದರೆ ಸರಿಯಲ್ಲ.

9. ಪ್ಲಾಸ್ಟಿಕ್ ಕವರ್ ಗಳನ್ನು ನಾವು ಸೃಷ್ಟಿಸಿ ಪೊಲೀಸರಿಗೆ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಪೊಲೀಸರು ನನಗೆ ಠಾಣೆಗೆ ಬರುವಂತೆ ನೋಟಿಸ್ ಕೊಟ್ಟಿರಲಿಲ್ಲ. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟ ಸಮಯ ಗೊತ್ತಿಲ್ಲ. ಪೊಲೀಸರು ನನಗೆ ಹೇಳಿಕೊಟ್ಟಂತೆ ಹೇಳಿಕೆ ನೀಡಲು ಸುಮಾರು 1 ಗಂಟೆ ಅವಧಿ ಆಗಿದೆ ಎಂದರೆ ಸಾಕ್ಷಿದಾರರು ಪೊಲೀಸರು

ತನಗೆ ಹೇಳಿಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಪೊಲೀಸ ಠಾಣೆಯಲ್ಲಿ ನಾನು ಹೇಳಿಕೆ ಕೊಡುವಾಗ ಚಾಸಾ–1, ಚಾಸಾ–7, ಚಾಸಾ–13, ಚಾಸಾ–14 ಇದ್ದೆವು. ನಾನು ಸುಮಾರು 15 ನಿಮಿಷದಿಂದ 30 ನಿಮಿಷ ತನಕ ಹೇಳಿಕೆ ಕೊಟ್ಟಿದ್ದೇನೆ. ನಾನು ಹೇಳಿಕೆಯನ್ನು ಮೂರು ಸ್ಟಾರ್ ಇದ್ದ ಪೊಲೀಸ್ ಅಧಿಕಾರಿ ಸಮಕ್ಷಮ ಹೇಳಿಕೆ ಕೊಟ್ಟಿದ್ದೇನೆ. ನಾನು ಹೇಳಿದಂತೆ ಪೊಲೀಸ್ ಠಾಣೆಗೆ ಹೋಗಿಲ್ಲ ಮತ್ತು ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆರೋಪಿಗಳು ಶ್ರೀಮತಿ ನಂಜಮ್ಮ ಅವರ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಶ್ರೀಮತಿ ನಂಜಮ್ಮ ಅವರು  ತನ್ನ ವಯಸ್ಸಿನ ಕಾರಣ ಬಿದ್ದು ಗಾಯಗೊಂಡಿದ್ದಾರೆ ಎಂದರೆ ಸರಿಯಲ್ಲ. ಆಸ್ತಿ ವಿಚಾರವಾಗಿ ಆರೋಪಿಗಳನ್ನು ಜೈಲಿಗೆ ಕಳುಹಿಸಿ ಆಸ್ತಿಯನ್ನು ಪಡೆಯುವ ಉದ್ದೇಶದಿಂದ ಚಾಸಾ–1 ಅವರಿಂದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು  ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:– ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು  ಸತ್ರ
ನ್ಯಾಯಾಧೀಶರು, ಮೈಸೂರು